**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.**

**ಸಿಸಿ ನಂಃ 15/2020**

| | | | |
|---|---|---|---|
| ಹೆಸರು | ಃ | ಶಿವಣ್ಣ | ಸಿ.ಡಬ್ಲ್ಯೂ 4 |
| ತಂದೆಯ ಹೆಸರು | ಃ | ಗೂಳಿಗೌಡ | ಪಿ.ಡಬ್ಲ್ಯೂ 1 |
| ವಯಸ್ಸು | ಃ | 73 ವರ್ಷ | |
| ಉದ್ಯೋಗ | ಃ | ವ್ಯವಸಾಯ | |
| ವಾಸ ಸ್ಥಳ | ಃ | ಅಂಬರಹಳ್ಳಿ | |

ಸಾಕ್ಷಿಗೆ ದಿನಾಂಕಃ **06.02.2024** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ .**

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಚಾಸಾ 1 ಮತ್ತು 2 ರವರು ನನಗೆ ಗೊತ್ತು. ಚಾಸಾ 3 ರವರು ನನಗೆ ಗೊತ್ತಿಲ್ಲ. ಮಾದೇಗೌಡರವರು ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ನಾನು ತೀವ್ರವಾಗಿ ಗಾಯಗೊಂಡಿರುತ್ತೇನೆ. ನನಗೆ ಅಪಘಾತವಾದ ನಂತರ ಸರಿಯಾಗಿ ಕಿವಿ ಕೇಳುತ್ತಿಲ್ಲ ಮತ್ತು ಕಾಲು ಮುರಿದಿರುತ್ತದೆ. ಅಪಘಾತವು ನೆಲಮಾಕನಹಳ್ಳಿ ಕಾಗೆಪುರದ ಮುಂದೆ ಮದ್ದೂರು ಮಳವಳ್ಳಿ ರಸ್ತೆಯಲ್ಲಿ ಅಪಘಾತವಾಗಿರುತ್ತದೆ. ಆ ದಿನ ನಾನು ಡಿಸ್ಕವರಿ ಬೈಕ್‌ನಲ್ಲಿ ಹೋಗುತ್ತಿದ್ದೆನು. ಅದು ನನ್ನ ಮಗನಿಗೆ ಸೇರಿದ ಬೈಕ್ ಆಗಿರುತ್ತದೆ. ಆ ದಿನ ಮೃತರು ನನ್ನನ್ನು ಹಾಲುತುಪ್ಪದ ತಿಥಿ ಕಾರ್ಯಕ್ಕೆ ಕರೆದುಕೊಂಡು ಹೋಗಿದ್ದರು. ಆಗ ಸಮಯ ಬೆಳಿಗ್ಗೆ 7-30 ಆಗಿತ್ತು. ಕಾರ್ಯ ಮುಗಿಸಿ ಊಟಮುಗಿಸಿಕೊಂಡು ವಾಪಸ್ ಬರುವಾಗ ಅಪಘಾತವಾಗಿರುತ್ತದೆ. ನಮಗೆ ಟಾಟಾ ಎಸಿ ವಾಹನ ಅಪಘಾತ ಪಡಿಸಿರುತ್ತದೆ. ನಾವು ವಾಹನವನ್ನು ನೋಡಿದ್ದು, ಅದು ವೇಗವಾಗಿ ಬಂದು ನಮಗೆ ಹಿಂಭಾಗದಿಂದ ಬಂದು ಡಿಕ್ಕಿ ಪಡಿಸಿರುತ್ತದೆ. ನಾನೇ ಆ ದಿನ ತಲೆಗವಚು ಧರಿಸಿ, ವಾಹನ ಚಲಾಯಿಸುತ್ತಿದ್ದೆ ನಾನು ನೋಡಿದಾಗ ಒಂದು ಕಲ್ಲು

ಎಸೆಯುವ ಅಂತದಲ್ಲಿ ಆ ವಾಹನ ಬರುತ್ತಿದ್ದು, ವೇಗವಾಗಿ ಬಂದು ಹಿಂಭಾಗದಿಂದ ಡಿಕ್ಕಿಪಡಿಸಿರುತ್ತದೆ.

2. ಅಪಘಾತವಾದ ನಂತರ ಮೃತ ಮಾದೇಗೌಡರವರು ವಾಹನದಿಂದ ಕೆಳಗೆ ಬಿದ್ದಿದ್ದು, ಅವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ನಾನು ಸಹ ಬೈಕ್‌ನಿಂದ ಕೆಳಗೆ ಬಿದ್ದಿದ್ದು, ನನಗೆ ಕಾಲು ಮುರಿದಿತ್ತು ಮತ್ತು ತಲೆಗೆ ಪೆಟ್ಟಾಗಿರುತ್ತದೆ. ಅಪಘಾತ ಪಡಿಸಿದ ವಾಹನ ಕೆ.ಎಂ. ದೊಡ್ಡಿಯಿಂದ ಮಳವಳ್ಳಿಯ ಕಡೆಗೆ ಬರುತ್ತಿತ್ತು. ಈಗ ನನಗೆ ತೋರಿಸದ ಫೋಟೋಗಳಲ್ಲಿ ಕಾಣುವ ಡಿಸ್ಕವರಿ ವಾಹನವನ್ನು ಆ ದಿನ ಚಲಾಯಿಸುತ್ತಿದ್ದೆನು. ಸದರಿ ಫೋಟೋಗಳನ್ನು ನಿಪಿ 1 ರಿಂದ 3 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಫೋಟೋಗಳಲ್ಲಿ ಕಾಣುವ ವಾಹನಕ್ಕೆ ಟಾಪ್ ಇರಲಿಲ್ಲ. ಸದರಿ ಫೋಟೋಗಳನ್ನು ನಿಪಿ 4 ರಿಂದ 6 ಎಂದು ಗುರುತಿಸಲಾಯಿತು. ನಿಪಿ 4 ರಿಂದ 6 ರಲ್ಲಿ ಇರುವ ವಾಹನದ ಬಣ್ಣವೇ ವಾಹನದ ಬಣ್ಣವಾಗಿತ್ತು. ನನಗೆ ಪೆಟ್ಟಾದ ನಂತರ ನಾನು ಕೆಳಕ್ಕೆ ಬಿದ್ದಿದ್ದು, ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಮಂಡ್ಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿಂದ ಮೈಸೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆಸ್ಪತ್ರೆಗೆ ಕರೆದುಕೊಂಡು ಹೋದ ವಿಚಾರವನ್ನು ನನಗೆ ನನ್ನ ಮಗ ಹೇಳಿರುತ್ತಾರೆ. ಅಪಘಾತವು ಟಾಟಾ ಎಸ್ ವಾಹನದ ಅತೀವೇಗದಿಂದ ಆಗಿರುತ್ತದೆ. ಅಪಘಾತದ ಸಂದರ್ಭ ನಾನು ಗಾಯಗೊಂಡಿದ್ದು, ಚಾಲಕನನ್ನು ನೋಡಿಲ್ಲ. ಅಪಘಾತದ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು 8 ದಿನಗಳ ಕಾಲ ಆಸ್ಪತ್ರೆಯಲ್ಲಿ ಇದ್ದು, ಬಿಡುಗಡೆ ಮಾಡಿರುತ್ತಾರೆ. ಆ ನಂತರ 2 ದಿನಕ್ಕೊಮ್ಮೆ ನಾನು ಆಸ್ಪತ್ರೆಗೆ ಹೋಗಿರುತ್ತೇನೆ.

**ಎಪಿಪಿ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**

**<u>ಪಾಟೀ ಸವಾಲುಃ ಎ ಪಿ ಪಿ ರವರಿಂದ ಃ</u>**

ನಾನು ತಿಥಿ ಕಾರ್ಯಕ್ಕೆ ದಿ: 13.09.2019 ರಂದು ಹೋಗಿರುತ್ತೇನೆ ಎಂದರೆ ಸಾಕ್ಷಿ ಆ ದಿನ ಶುಕ್ರವಾಗಿದ್ದು, 14.09.2019 ಇರಬಹುದು ಎಂದು ಉತ್ತರಿಸುತ್ತಾರೆ. ನಾನು

ಚಾಲನೆ ಮಾಡುತ್ತಿದ್ದ ವಾಹನ ಸಂಖ್ಯೆ ಕೆಎ-11-ಆರ್.-6721 ಎಂದು ಮರೆತಿದ್ದೇನೆ. ಮಧ್ಯಾಹ್ನ ಸುಮಾರು 2-00 ಗಂಟೆಯ ಸಮಯದಲ್ಲಿ ಅಪಘಾತವಾಗಿದ್ದು, ಆ ಸಂದರ್ಭ ನಾನು ನೆಲಮಾಕನಹಳ್ಳಿ ಕಡೆಯಿಂದ ಬಂದು ಕೆ.ಎಂ.ದೊಡ್ಡಿ ಕಡೆಗೆ ತಿರುಗುತ್ತಿದ್ದಾಗ ಅಪಘಾತ ಪಡಿಸಿದ ವಾಹನ ಮದ್ದೂರು ಕಡೆಯಿಂದ ಮಳವಳ್ಳಿ ಕಡೆಗೆ ಬಂದು ಹಿಂಭಾಗದಿಂದ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿ. ಅಪಘಾತ ಪಡಿಸಿದ ವಾಹನ ಹಿಂಭಾಗದಿಂದ ಬರುತ್ತಿರಲಿಲ್ಲ ಅದು ನಾವು ತಿರುಗಿಕೊಳ್ಳುತ್ತಿದ್ದಾಗ ಹಿಂಭಾಗದಲ್ಲಿ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸಾಕ್ಷಿ ಎಡಭಾಗದಲ್ಲಿ ಬರುತ್ತಿದ್ದವರು ಬಲಕ್ಕೆ ಬಂದು ಡಿಕ್ಕಿ ಪಡಿಸಿರುತ್ತಾರೆ. ಅಪಘಾತ ಪಡಿಸಿದ ವಾಹನ ಟಾಟಾ ಎಸ್ ಅಲ್ಲ ಬುಲೇರೋ ವಾಹನ ಎಂದರೆ ಸಾಕ್ಷಿ ಈಗ ನನಗೆ ನೀವು ತೋರಿಸಿದ ವಾಹನ ಆ ದಿನ ನನಗೆ ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿ. ಬುಲೇರೋ ವಾಹನದ ಅತೀವೇಗ ಮತ್ತು ಅಜಾಗರೂಕತೆಯಿಂದ ಅಪಘಾತವಾಗಿರುತ್ತದೆ ಎಂಧರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಎ.ಪಿ.ಆರ್. ವಕೀಲರಿಂದಃ</u>**

ಮೃತ ಮಾದೇಗೌಡರವರು ನಮ್ಮ ಸಂಬಂಧಿಕರಲ್ಲ, ಅವರು ನಮ್ಮ ಗ್ರಾಮಸ್ಥರು. ಚಾಸಾ 1 ನನ್ನ ಅಣ್ಣನ ಮಗ. ಚಾಸಾ 2 ರವರು ನಮ್ಮ ಗ್ರಾಮಸ್ಥರು. ತಿಥಿ ಕಾರ್ಯಕ್ಕೆ ನೆಲಮಾಕನಹಳ್ಳಿಗೆ ಹೋಗಿದ್ದೆ. ನಮ್ಮ ಊರಿನಿಂದ ಸುಮಾರು 50 ಜನ ಹೋಗಿದ್ದರು. ಆ ದಿನ 13/14 ಆಗಿದ್ದು, ಶುಕ್ರವಾರವಾಗಿತ್ತು. ನಾವು ಆ ದಿನ ಬೆಳಿಗ್ಗೆ 7-30 ಗಂಟೆಗೆ ಹೊರಟಿರುತ್ತೇವೆ. ತಿಥಿ ಕಾರ್ಯಕ್ಕೆ ನಾನು ಬೈಕ್‌ನಲ್ಲಿ ಹೋಗಿದ್ದೆ. ನಾನೇ ಬೈಕ್ ಚಾಲನೆ ಮಾಡುತ್ತಿದ್ದೆ. ನಾನು 33 ವರ್ಷದ ಹಿಂದೆ ವಾಹನ ಚಾಲನಾ ಪರವಾನಿಗೆ ಪಡೆದಿರುತ್ತೇನೆ. ನನ್ನ ಚಾಲನಾ ಪರವಾನಿಗೆಯನ್ನು ಪೊಲೀಸರಿಗೆ ನೀಡಿರುತ್ತೇನೆ. ನೆಲಮಾಕನಹಳ್ಳಿಗೆ 8-45 ರಿಂದ 9-00 ಗಂಟೆಗೆ ಹೋಗಿರುತ್ತೇವೆ. ಅಪಘಾತವಾದ ನಂತರ ನನ್ನ ಒಂದು ಕಣ್ಣನ್ನು ಶಸ್ತ್ರಚಿಕಿತ್ಸೆ ಮಾಡಿಸಿರುತ್ತೇನೆ. ಮತ್ತೊಂದು ಕಣ್ಣು ಚೆನ್ನಾಗಿದೆ. ನನಗೆ 73 ವರ್ಷ ವಯಸ್ಸಾಗಿದೆ. ತಿಥಿಗೆ ಹೋಗಿದ್ದು, ಅಲ್ಲಿ ಬಾಡೂಟ ಮಾಡಿದ್ದರು. ನನಗೆ ಮದ್ಯಪಾನ ಮಾಡುವ ಅಭ್ಯಾಸ ಇಲ್ಲ. ಮೃತ ಮಾದೇಗೌಡರವರಿಗೂ ಮದ್ಯಪಾನ ಮಾಡುವ ಅಭ್ಯಾಸ

ಇಲ್ಲ. ಅಪಘಾತ ಪಡಿಸಿದ ಸಂದರ್ಭ ವಾಹನಕ್ಕೆ ಟಾಪ್ ಇರಲಿಲ್ಲ. ಕಾರ್ಯ ಮುಗಿಸಿ, ಮದ್ಯಾಹ್ನ 2-30 ಕ್ಕೆ ನೆಲಮಾಕನಹಳ್ಳಿಯಿಂದ ಬಂದಿರುತ್ತೇವೆ. ನೆಲಮಾಕನಹಳ್ಳಿ ಗೇಟ್ ಬಳಿ ರಸ್ತೆ ಉಬ್ಬು ಹಾಕಲಾಗಿದೆ ಎಂದರೆ ಸರಿಯಲ್ಲ. ನೆಲಮಾಕನಹಳ್ಳಿ ಕಡೆಯಿಂದ ಬಂಧು ಮದ್ದೂರು ಕಡೆಗೆ ತಿರುವು ಪಡೆದುಕೊಳ್ಳುತ್ತಿದ್ದಾಗ ಡಿಕ್ಕಿ ಪಡಿಸಿರುತ್ತಾರೆ. ತಿರುವು ಪಡೆಯುವ ಸಂದರ್ಭ ನಾನು ಬಲಭಾಗದಲ್ಲಿ ಇಂಡಿಕೇಟರ್ ಹಾಕಿದ್ದೆ. ನಾನು ವಾಹನ ಚಾಲನೆ ಮಾಡುವ ಸಂದರ್ಭ ತಲೆಗವಚು ಧರಿಸಿದ್ದೆ. ಈ ಬಗ್ಗೆ ಹೇಳಿಕೆಯಲ್ಲಿ ಬರೆಸಿಲ್ಲ. ನಮ್ಮ ವಾಹನದ ಸಂಖ್ಯೆ ನನಗೆ ನೆನಪಿಲ್ಲ. ಅಪಘಾತವು ನನ್ನ ನಿರ್ಲಕ್ಷ್ಯತೆಯಿಂದ ಆಗಿದ್ದು, ನನಗೆ ಚಾಲನಾ ಪರವಾನಿಗೆ ಇರಲಿಲ್ಲ ನನಗೆ ವಾಹನ ಚಾಲನೆ ಮಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಚೇತಕ್, ಡಿಸ್ಕವರ್, ಪಲ್ಸರ್ ಎಲ್ಲಾ ವಾಹನವನ್ನು ಚಾಲನೆ ಮಾಡುತ್ತೇನೆ. ನಾನು ಮತ್ತು ಮೃತ ಮಾದೇಗೌಡರವರ ಕುಟುಂಬಸ್ಥರು ಸೇರಿ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಅಪಘಾತವು ನನ್ನ ನಿರ್ಲಕ್ಷ್ಯತೆಯಿಂದ ಆಗಿದ್ದು, ಬೇರೆ ವಾಹನದ ಮೇಲೆ ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಬುಲೇರೋ ವಾಹನದಿಂದ ಅಪಘಾತವಾಗಿರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.